ಮಾಡುವನು. ಅವನ ಮತ್ತು ಅವನ ಕುಟುಂಬದ ಜನರ ರಕ್ಷಣೆಯ ಜೊತೆಗೆ, ತನ್ನ ಸುತ್ತಲಿನ ಎಲ್ಲದರ ಹಾಗೂ ಎಲ್ಲರ ರಕ್ಷಣೆಯ ಜವಾಬ್ದಾರಿಯನ್ನೂ 'ಹಿಂದೂ' ಆದವನು ವಹಿಸಿಕೊಳ್ಳುತ್ತಾನೆ. ಹೀಗೆ ಸಂಪೂರ್ಣ ಪರಿಸರದ, ವಾತಾವರಣದ ಹಿತರಕ್ಷಣೆ ಅವನ ಕರ್ತವ್ಯವಾಗುತ್ತದೆ.

### ಹಿಂದೂಧರ್ಮದ ಮೂಲಪುರುಷರು

ದೇವರನ್ನು ನೋಡಿ ಆನಂದವನ್ನು ಅನುಭವಿಸಿದ ಜನರು ತುಂಬಾ ಹಿಂದಿನ ಕಾಲದಿಂದಲೂ ಇದ್ದಾರೆ. ಇವರನ್ನೇ ಋಷಿಗಳೆಂದು ಕರೆಯುತ್ತೇವೆ. 'ಋಷಿ' ಎಂದರೆ ವಿಶೇಷವಾದ ದರ್ಶನವನ್ನು ಪಡೆದುಕೊಂಡಿರುವವರು ಎಂದರ್ಥ. ಅಂಥವರು ಪುರುಷರಾದರೂ ಆಗಿರಬಹುದು, ಮಹಿಳೆಯರಾದರೂ ಆಗಿರಬಹುದು, ಅವರು ಯುವಕರೂ ಆಗಿರಬಹುದು, ಮುದುಕರೂ ಆಗಿರಬಹುದು. ಅವರು ಬಹಳ ಹಿಂದಿನ ಕಾಲದಲ್ಲೂ ಇದ್ದಿರಬಹುದು, ಇತ್ತೀಚಿನ ಕಾಲದಲ್ಲೂ ಇದ್ದಿರಬಹುದು. ಅವರು ವಿಶೇಷ ವ್ಯಕ್ತಿಗಳು, ಏಕೆಂದರೆ ಅವರು ನಮಗೆ ದೇವರ ಬಗ್ಗೆ ತಿಳಿಸಿಕೊಡಬಲ್ಲರು.

### ಋಷಿಯಾದ 'ವಾಕ್' ಎಂಬ ಹುಡುಗಿಯ ಕಥೆ



ಬಹಳ ಹಿಂದಿನ ಕಾಲದಲ್ಲಿ ಭಾರತದಲ್ಲಿ ಪುಟಾಣಿ ಹುಡುಗಿಯೊಬ್ಬಳಿದ್ದಳು. ಆಕೆಯ ಹೆಸರು 'ವಾಕ್'. ಆಕೆಯು ತುಂಬಾ ಮಾತನಾಡುತ್ತಿದ್ದಳು. ಮಾತು ಶುರು ಮಾಡಿಬಿಟ್ಟರೆ ನಿಲ್ಲಿಸುತ್ತಲೇ ಇರಲಿಲ್ಲ. ಒಂದು ದಿನ ಆಕೆಯ ಮನೆಯಲ್ಲಿ ವಿಶೇಷ. ಆಕೆಯ ಅಮ್ಮ ಅಡುಗೆ ಮನೆಯಲ್ಲಿ ಏನೇನೋ ಕೆಲಸದಲ್ಲಿ ನಿರತರಾಗಿದ್ದಾರೆ. ವಾಕ್ ಒಂದೇ ಸಮನೆ ಅಮ್ಮನ ಜೊತೆ ಮಾತನಾಡುತ್ತಳೇ ಇದ್ದಾಳೆ. ಅಮ್ಮನಿಗೆ ಸ್ವಲ್ಪ ಕೋಪ ಬಂತು. "ಮಗು! ನಾನು ತುಂಬಾ ಕೆಲಸಗಳಲ್ಲಿ ಸಿಕ್ಕಿಹಾಕಿಕೊಂಡು ಒದ್ದಾಡ್ತಾ ಇರೋದು ಕಾಣಿಸ್ತಾ ಇಲ್ವಾ? ಹೋಗಾಚೆ" ಎಂದು ಬಯ್ದಳು.


ವಾಕ್ ಸುಮ್ಮನೇ ತನ್ನ ಕೊಠಡಿಗೆ ಹೊರಟುಹೋದಳು. ಆಕೆಯ ಹಾಸಿಗೆ ಮೇಲೆ ಕುಳಿತುಕೊಂಡಳು. ಆಕೆಗೆ ತುಂಬಾ ದುಃಖ ಆಯಿತು. ಅಳುವುದಕ್ಕೆ ಆರಂಭ ಮಾಡಿದಳು. ಸ್ವಲ್ಪ ಹೊತ್ತಾದ ಮೇಲೆ ಆಕೆಯು ಕಣ್ಣೀರು ಒರೆಸಿಕೊಂಡಳು. "ಈಗ ನಾನು ಸುಮ್ಮನೆ ಕುಳಿತುಕೊಳ್ತೀನಿ. ಇನ್ನು ಯಾವತ್ತೂ ಮಾತನಾಡುವುದೇ ಇಲ್ಲ" ಎಂದು ಚಿಂತಿಸಿದಳು. ಏನಾದರೂ ಮಾತನಾಡಬೇಕು, ಚೇಷ್ಟೆ ಮಾಡಬೇಕು ಎನ್ನಿಸಿದಾಗಲೆಲ್ಲಾ ಆಕೆಯು ಅದನ್ನು ತಡೆದುಕೊಳ್ಳುತ್ತಿದ್ದಳು. ಮೌನವಾಗಿ ಅಲುಗಾಡದೆ ಸುಮ್ಮನೆ ಕುಳಿತುಕೊಳ್ಳುವ ಅಭ್ಯಾಸ ಮಾಡಿದಳು. ಗಂಟೆಗಟ್ಟಲೆ ಸುಮ್ಮನೆ ಕುಳಿತುಕೊಂಡಳು. ಆಕೆಯ ಚೇಷ್ಟೆಯ ಮಾತುಗಳಿರಲಿ, ಯೋಚನೆಗಳೂ ನಿಂತುಹೋದವು. ಮಾತನಾಡದೆ, ಅಲುಗಾಡದೆ ಸುಮ್ಮನೆ ಕುಳಿತುಕೊಳ್ಳುವುದು ತುಂಬಾ ಕಷ್ಟ. ಎಲ್ಲೋ ಅಪರೂಪಕ್ಕೆ ಒಬ್ಬಿಬ್ಬರು ಈ ತರಹ ಇರುತ್ತಾರೆ. ಹೀಗೆ ಕೆಲವು ಕಾಲ ಕಳೆಯಿತು. ಆಕೆಯು ಒಮ್ಮೆ ದೊಡ್ಡ ಬೆಳಕಿನ ರಾಶಿಯನ್ನು ನೋಡಿದಳು. ಆಕೆಗೆ ಇಂಪಾದ ಶಬ್ದವೂ ಕೇಳಿಸುತ್ತಾ ಇತ್ತು. 'ಓಂ' ಎಂಬ ನಾದ ಎಲ್ಲ ಕಡೆಯಿಂದ ಕೇಳಿಬರುತ್ತಿತ್ತು. ಆಕೆಯು ದೇವರನ್ನು ಕಂಡಳು. ಇದನ್ನೇ **ಆಧ್ಯಾತ್ಮಿಕ ಅನುಭವ** ಎಂದು ಕರೆಯುತ್ತಾರೆ. ಏನಾದರೂ ಆಶ್ಚರ್ಯಕರವಾದದ್ದು, ಸುಂದರವಾದದ್ದು ನೋಡಿದರೆ ನಮಗೆ ಸಂತೋಷ ಆಗುತ್ತದೆ, ಅಲ್ಲವೇ! ಅಧ್ಯಾತ್ಮ ಅನುಭವವೂ ಸ್ವಲ್ಪ ಹಾಗೇ. ಆದರೆ ಆಗ ಉಂಟಾಗುವ ಸಂತೋಷ ತುಂಬಾ ಗಾಢವಾಗಿ ಇರುತ್ತದೆ.

ಸ್ವಲ್ಪ ಹೊತ್ತಾದ ಮೇಲೆ ವಾಕ್ ಕಣ್ಣು ಬಿಟ್ಟಳು. ಆಕೆ ಗಂಟೆಗಟ್ಟಲೆ ಮೌನವಾಗಿ ಇದ್ದಳು. ಆಕೆಗೆ ದೇವರ ಅನುಭವ ಆಗಿತ್ತು. ಆಕೆಗೆ ತುಂಬಾ ಆಶ್ಚರ್ಯ, ಆನಂದ ಆಗಿತ್ತು. ಈಗ ಆಕೆಯು 'ಋಷಿ'ಯಾಗಿಬಿಟ್ಟಿದ್ದಳು. ಅವತ್ತಿನಿಂದ ಆಕೆಯು ಎಲ್ಲರಿಗಿಂತ ಭಿನ್ನವಾಗಿ ಇರುತ್ತಿದ್ದಳು. ದೇವರ ಬಗ್ಗೆ ಎಲ್ಲರಿಗೂ ಹೇಳುತ್ತಿದ್ದಳು. ಈಗಲೂ ಅವಳು ಮಾತುಗಾರ್ತಿಯೇ. ಆದರೆ ಈಗ ಆಕೆಯ ಮಾತೆಲ್ಲಾ ದೇವರಿಗೇ ಸಂಬಂಧಿಸಿದ್ದು. ಎಲ್ಲರೂ ಕುತೂಹಲದಿಂದ ಆಕೆಯ ಮಾತನ್ನು ಕೇಳುತ್ತಿದ್ದರು. ಆಕೆಯ ಮಾತುಗಳು ಅರ್ಥಗರ್ಭಿತವಾಗಿರುತ್ತಿದ್ದವು. ಇಡೀ ದೇಶದಲ್ಲೇ ಅವಳು ಪ್ರಸಿದ್ಧಳಾದಳು. "ದೇವರನ್ನು ನಂಬಿದರೆ ಸಾಲದು, ದೇವರನ್ನು ನಾವು ಕಾಣಬೇಕು, ಅನುಭವಿಸಬೇಕು" ಎಂದು ಆಕೆ ಹೇಳುತ್ತಾ ಇದ್ದಳು.

ಪುಟಾಣಿ ಹುಡುಗಿ ವಾಕ್ ತರಹ ನಾವೂ ನಮ್ಮ ಮಾತು ಮತ್ತು ಮನಸ್ಸನ್ನು ನಿಯಂತ್ರಿಸಬೇಕು. ಅದರ ಮೂಲಕ ಆಧ್ಯಾತ್ಮಿಕ ಅನುಭವ ಪಡೆಯಬೇಕು. ವಿಶೇಷವಾದದ್ದನ್ನೋ ಆಶ್ಚರ್ಯಕರವಾದದ್ದನ್ನೋ ನೋಡಿದಾಗ ನಮಗೂ ಸಣ್ಣಮಟ್ಟದ ಆಧ್ಯಾತ್ಮಿಕ ಅನುಭವ, ಆನಂದ ಉಂಟಾಗುತ್ತದೆ. ಅದನ್ನೇ ನಾವು ಹೆಚ್ಚು ಹೆಚ್ಚಾಗಿ ಅನುಭವಿಸಿ ನಿಜವಾದ ಆಧ್ಯಾತ್ಮಿಕ ಅನುಭವ ನೀಡುವ ಆನಂದದ ಸವಿಯನ್ನು ಅನುಭವಿಸಬೇಕು. ಆಗಲೇ ನಾವು ಮನುಷ್ಯರಾಗಿ ಹುಟ್ಟಿದ್ದು ಸಾರ್ಥಕ. (ಮೂಲ: *Primary Hinduism*, Pub: Sri Ramakrishna Math, Mylapore, Chennai)

**ದ**ಕ್ಷಿಣೇಶ್ವರ ದೇವಸ್ಥಾನದಲ್ಲಿರುವ ಶ್ರೀರಾಮಕೃಷ್ಣರ ಕೊಠಡಿಯ ಉತ್ತರದ ವರಾಂಡ ಅತ್ಯಂತ ಮಹತ್ವವಾದ ಸ್ಥಳ. ಮಥುರಬಾಬು ರಾಣಿ ರಾಸಮಣಿಯ ಅಳಿಯ; ಕಾಳೀ ದೇವಸ್ಥಾನದ ಉಸ್ತುವಾರಿಯನ್ನು ಅವನೇ ನೋಡಿಕೊಳ್ಳುತ್ತಿದ್ದನು. ಅವನು ಇದೇ ಸ್ಥಳದಲ್ಲಿಯೇ ಶ್ರೀರಾಮಕೃಷ್ಣರ ದಿವ್ಯತೆಯು ಪ್ರಕಟವಾದ ಅದ್ಭುತ ದರ್ಶನವೊಂದನ್ನು ಕಂಡನು. ಶ್ರೀರಾಮಕೃಷ್ಣರು, ಒಮ್ಮೆ ಅಂತರ್ಮುಖಿಗಳಾಗಿ ಈ ವರಾಂಡದಲ್ಲಿ ಅತ್ತಿಂದಿತ್ತ ಅಡ್ಡಾಡುತ್ತಿದ್ದರು. ಮಥುರಬಾಬುವು 'ಬಾಬುಗಳ ಬಂಗಲೆ' ಎಂದು ಕರೆಯಲ್ಪಡುತ್ತಿದ್ದ ಮನೆಯ ಮುಂಭಾಗದಲ್ಲಿ ಕುಳಿತಿದ್ದನು. ಅದು ಆ ವರಾಂಡಕ್ಕೆ ಕೆಲವು ಅಡಿಗಳ ಅಂತರದಲ್ಲಿ ಇತ್ತು. ಮಥುರಬಾಬುವು ಶ್ರೀರಾಮಕೃಷ್ಣರನ್ನೇ ದಿಟ್ಟಿಸುತ್ತ ಇದ್ದನು. ಶ್ರೀರಾಮಕೃಷ್ಣರು ಒಂದು ದಿಕ್ಕಿನಲ್ಲಿ ನಡೆದುಹೋಗುತ್ತಿರುವಾಗ, ಅವರ ಬದಲಾಗಿ ಕಾಳೀಮಾತೆಯೇ ಕಂಡುಬಂದಳು. ಮತ್ತೆ ಅವರು ಇನ್ನೊಂದು ದಿಕ್ಕಿನಲ್ಲಿ ನಡೆಯಲು ಆರಂಭಿಸಿದಾಗ ಅಲ್ಲಿ ಸಾಕ್ಷಾತ್ ಶಿವನೇ ಪ್ರತ್ಯಕ್ಷನಾದನು!

### ರಾಣಿ ರಾಸಮಣಿಯ ಸ್ಮಾರಕ



ಶ್ರೀರಾಮಕೃಷ್ಣರ ಕೊಠಡಿಯ ಉತ್ತರ ವರಾಂಡಕ್ಕೆ ಎದುರಾಗಿ, ರಾಣಿ ರಾಸಮಣಿಗೆ ಸಮರ್ಪಿತವಾದ ಸ್ಮಾರಕವೊಂದಿದೆ. ಅದನ್ನು ೨೦೦೩ನೆಯ ಇಸವಿಯಲ್ಲಿ ನಿರ್ಮಿಸಲಾಯಿತು. ಶ್ರೀರಾಮಕೃಷ್ಣರು ಆಕೆಯ ಬಗ್ಗೆ ಹೀಗೆ ಹೇಳುತ್ತಿದ್ದರು: "ರಾಣಿ ರಾಸಮಣಿಯು ಜಗನ್ಮಾತೆಯ ಅಷ್ಟ ನಾಯಿಕೆಯರಲ್ಲಿ (ದಾಸಿಯರಲ್ಲಿ) ಒಬ್ಬಳು. ಆಕೆ ಜಗನ್ಮಾತೆಯ ಆರಾಧನೆಯನ್ನು ಜಗತ್ತಿನಾದ್ಯಂತ ಹರಡಲು ಜನ್ಮವೆತ್ತಿ ಬಂದಿದ್ದಳು. ಆಕೆಯ ಅಧಿಕೃತ ಮುದ್ರೆಯಲ್ಲಿ, 'ಕಾಳೀಚರಣ ಆಕಾಂಕ್ಷಿತ ಶ್ರೀರಾಸಮಣಿ ದಾಸಿ' ಎಂದು ಅವಳು ಕೆತ್ತಿಸಿದ್ದಳು. ರಾಣಿಯ ಪ್ರತಿಯೊಂದು ಆಚರಣೆಯಲ್ಲಿಯೂ ಜಗನ್ಮಾತೆಯ ಮೇಲೆ ಅವಳಿಗಿದ್ದ ದೃಢಭಕ್ತಿಯು ಪ್ರಕಟವಾಗುತ್ತಿತ್ತು."

ಈ ಸ್ಮಾರಕದಲ್ಲಿ ರಾಣಿ ರಾಸಮಣಿಯ ಅಮೃತಶಿಲೆಯ ಮೂರ್ತಿಯೊಂದನ್ನು ಇರಿಸಲಾಗಿದೆ. 'ಶ್ರೀರಾಮಕೃಷ್ಣ ವಚನವೇದ'ದ ಕರ್ತೃವಾದ ಮಹೇಂದ್ರನಾಥ ಗುಪ್ತರು ಹೀಗೆ ಬರೆಯುತ್ತಾರೆ: "ಸಂನ್ಯಾಸಿಗಳು, ಸಂತರು, ಹಿಂದೂಗಳು, ಕ್ರೈಸ್ತರು, ಬ್ರಾಹ್ಮಭಕ್ತರು, ಶಾಕ್ತರು, ವೈಷ್ಣವರು, ಪುರುಷರು, ಮಹಿಳೆಯರು – ಎಲ್ಲರೂ ಇಲ್ಲಿಗೆ ಬರುತ್ತಿದ್ದರು. ರಾಣಿ ರಾಸಮಣಿ, ನೀನು ನಿಜವಾಗಿಯೂ ಧನ್ಯಳು! ನಿನ್ನ ಪುಣ್ಯದ ಫಲವಾಗಿಯೇ ಈ ಸುಂದರ ದೇಗುಲವು ನಿರ್ಮಾಣಗೊಂಡಿತು!"

### ಬಾಬುಗಳ ಬಂಗಲೆ

ದೇವಾಲಯ ಸಮುಚ್ಚಯದ ಹೊರಗಡೆ, ಉತ್ತರ ದಿಕ್ಕಿನಲ್ಲಿ ಬಾಬುಗಳ ಬಂಗಲೆ ಇದೆ. ಇದನ್ನು 'ಕುಟಿ ಬಾರಿ' ಎಂದೂ ಕರೆಯುತ್ತಾರೆ. ರಾಣಿ ರಾಸಮಣಿಯ ಕುಟುಂಬದ ಸದಸ್ಯರು ದೇವಸ್ಥಾನಕ್ಕೆ ಬಂದಾಗಲೆಲ್ಲ ಇದರಲ್ಲಿ ಇರುತ್ತಿದ್ದರು. ಈ ಬಂಗಲೆಯ ಮಹಡಿಯ ಮೇಲೆ ನಿಂತುಕೊಂಡೇ, ತಮ್ಮ ಯುವಕ ಶಿಷ್ಯರಿಗಾಗಿ ಶ್ರೀರಾಮಕೃಷ್ಣರು ಅಳುತ್ತಾ ಕೂಗಿ ಕರೆದಿದ್ದು. ಅವರ ಆಗಮನದ ಬಗ್ಗೆ ಜಗನ್ಮಾತೆಯು ಶ್ರೀರಾಮಕೃಷ್ಣರಿಗೆ ಸೂಚನೆಯನ್ನು ನೀಡಿದ್ದಳು. ಬಹುದಿನಗಳ ನಂತರ ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: "ದಿನದ ಕಾಲವು ಮುಗಿದನಂತರ, ಸಂಧ್ಯಾಕಾಲವು ಆರಂಭಗೊಳ್ಳುವಾಗ, ಎಷ್ಟೇ ಸಹಿಸಿಕೊಂಡರೂ ನನ್ನಲ್ಲಿ ಉಕ್ಕಿಬರುತ್ತಿದ್ದ ಕಳವಳವನ್ನು ಮತ್ತಿನ್ನು ತಾಳಲಾಗುತ್ತಿರಲಿಲ್ಲ; 'ಇನ್ನೊಂದು ದಿನ ಕಳೆದುಹೋಯಿತು, ಅವರೆಲ್ಲಾ ಬರಲಿಲ್ಲವಲ್ಲಾ' ಎಂಬ ಚಿಂತೆ ನನ್ನನ್ನು ಕಾಡುತ್ತಿತ್ತು. ದೇವಸ್ಥಾನಗಳಲ್ಲಿ ಶಂಖ ಮತ್ತು ಗಂಟೆಗಳ ನಿನಾದ ಕೇಳಿಬರುತ್ತಿದ್ದಾಗ, ನಾನು (ದೇವಸ್ಥಾನದ) ಒಡೆಯರ ಬಂಗಲೆಯ ಮಹಡಿಯನ್ನು ಹತ್ತುತ್ತಿದ್ದೆ. ನನ್ನ ಹೃದಯಾಂತರಂಗದ ಆತಂಕದಿಂದ ಪ್ರಕ್ಷುಬ್ಧನಾಗಿ, ತಾರಸ್ವರದಿಂದ ಕಣ್ಣುಗಳಲ್ಲಿ ನೀರು ಸುರಿಸುತ್ತಾ, ಕೂಗಿ ಕರೆಯುತ್ತಿದ್ದೆ:

'ಮಕ್ಕಳೇ, ನೀವೆಲ್ಲ ಎಲ್ಲಿದ್ದೀರಿ? ಎಲ್ಲರೂ ಬನ್ನಿರಿ, ನಿಮ್ಮನ್ನು ನೋಡದೆ ನನಗೆ ವಿಶ್ರಾಂತಿಯಿಲ್ಲ.' ಹೀಗೆ ದಿಕ್ಕುಗಳನ್ನೆಲ್ಲ ನನ್ನ ಆಕ್ರಂದನದಿಂದ ತುಂಬಿಬಿಡುತ್ತಿದ್ದೆ. ನನ್ನ ಕಳವಳ ಮತ್ತು ಪ್ರಕ್ಷುಬ್ಧತೆಗಳು ಎಷ್ಟರಮಟ್ಟಿಗೆ ಇದ್ದುವೆಂದರೆ, ತನ್ನ ಮಗುವನ್ನು ನೋಡಲು ಒಬ್ಬ ತಾಯಿಗೂ ಬಹುಶಃ ಇಷ್ಟೊಂದು ವ್ಯಾಕುಲತೆ ಇರುವುದೆಲ್ಲವೇನೋ. ಹಾಗೆಯೇ, ಇಬ್ಬರು ಪ್ರೇಮಿಗಳಾಗಲಿ, ಸ್ನೇಹಿತರಾಗಲಿ ಪರಸ್ಪರ ಮಿಲನಕ್ಕಾಗಿ, ಹೀಗೆ ನಡೆದುಕೊಳ್ಳುವುದೂ ಅಸಂಭವವೇ. ಇದಾಗಿ ಕೆಲವು ದಿನಗಳ ನಂತರ ಒಬ್ಬರಾದ ಮೇಲೆ ಒಬ್ಬರು ಭಕ್ತರು ಬರಲು ಆರಂಭಿಸಿದರು."

### ಶ್ರೀರಾಮಕೃಷ್ಣರ ಕೊಠಡಿ –೨

ಬಾಬುಗಳ ಬಂಗಲೆಯ ನೆಲ ಅಂತಸ್ತಿನಲ್ಲಿನ ವಾಯವ್ಯ ದಿಕ್ಕಿನ ಕೊಠಡಿಯಲ್ಲಿ ಶ್ರೀರಾಮಕೃಷ್ಣರು ಸುಮಾರು ೧೬ ವರ್ಷಗಳ ಕಾಲ ನೆಲೆಸಿದ್ದರು. ಅದು ಅವರ ದಕ್ಷಿಣೇಶ್ವರದ ಜೀವನದ ಮೊದಲ ಘಟ್ಟ. ಈ ಅವಧಿಯು ಅವರ ಉತ್ಕಟ ಆಧ್ಯಾತ್ಮಿಕ ಸಾಧನೆಗಳಿಗೆ ಹೆಸರಾಗಿದೆ. ಮಾಸ್ಟರ್ ಮಹಾಶಯ ಹೀಗೆ ಹೇಳಿದ್ದಾರೆ: "ಶ್ರೀರಾಮಕೃಷ್ಣರು ಈ ಬಂಗಲೆಯಲ್ಲಿ ೧೮೫೫ ರಿಂದ ೧೮೭೧ ರವರೆಗೆ, ೧೬ ವರ್ಷಗಳ ಕಾಲ ವಾಸಿಸುತ್ತಿದ್ದರು. ಆ ಕೊಠಡಿಯು ಗಂಗಾನದಿಗೆ ಅಭಿಮುಖವಾಗಿತ್ತು. ಅದರ ಮುಂದೆ ಒಂದು ವರಾಂಡ ಮತ್ತು ಅನಂತರ, ನದಿಗೆ ಹೋಗುವ ಮೆಟ್ಟಿಲುಗಳು ಇವೆ. ಅವರ ತಾಯಿ ಇದೇ ಕೊಠಡಿಯಲ್ಲಿ ಅವರೊಡನೆ ಇರುತ್ತಿದ್ದರು. ಈ ಕೊಠಡಿಯಲ್ಲಿ ಅದೆಷ್ಟು ಜಪ ಮತ್ತು ಧ್ಯಾನಗಳು ನಡೆದಿವೆಯೋ, ಎಷ್ಟೊಂದು ದರ್ಶನಗಳನ್ನು ಕಂಡಿದ್ದಾರೋ!" ಮಾಸ್ಟರ್ ಮಹಾಶಯ ದಕ್ಷಿಣೇಶ್ವರಕ್ಕೆ ಬಂದಾಗಲೆಲ್ಲ, ತಮ್ಮ ಕಡೆಯ ದಿನಗಳವರೆಗೆ, ಈ ಕೊಠಡಿಗೆ ಭೇಟಿ ಕೊಡುವುದನ್ನು ಮತ್ತು ಅಲ್ಲಿ ತಮ್ಮ ಗೌರವವನ್ನು ಅರ್ಪಿಸುವುದನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ.

ಈ ಕೊಠಡಿಯಲ್ಲಿ ಇದ್ದಾಗ ಶ್ರೀರಾಮಕೃಷ್ಣರು ಹಲವಾರು ಮಹತ್ವದ ಆಧ್ಯಾತ್ಮಿಕ ಅನುಭವಗಳನ್ನು ಪಡೆದುಕೊಂಡಿದ್ದರು. ಅವುಗಳಲ್ಲಿ ಒಂದು ಹೀಗಿದೆ: ಹಲಧಾರಿ ಎನ್ನುವವನು ಶ್ರೀರಾಮಕೃಷ್ಣರ ಒಬ್ಬ ಬಂಧು. ಅವನು ಕೆಲಕಾಲ ದಕ್ಷಿಣೇಶ್ವರದಲ್ಲಿ ವಾಸವಾಗಿದ್ದನು. ಶ್ರೀರಾಮಕೃಷ್ಣರ ದಿವ್ಯದರ್ಶನಗಳೆಲ್ಲವೂ ಸುಳ್ಳು ಎಂದು ಸಾಬೀತುಪಡಿಸಲು ಅವನು ಮುಂದಾದನು. ಶ್ರೀರಾಮಕೃಷ್ಣರು ಮಗುವಿನಂತಹ ಸ್ವಭಾವವುಳ್ಳವರು. ಅವರು ಹಲಧಾರಿಯ ಮಾತುಗಳನ್ನು ನಂಬಿದರು. ಇದರಿಂದಾಗಿ ಪ್ರಕ್ಷುಬ್ಧಗೊಂಡರು. ಈ ಪ್ರಸಂಗವನ್ನು ಕುರಿತು ನಂತರದ ದಿನಗಳಲ್ಲಿ ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: "ನಾನು ಕಂಡ ದಿವ್ಯರೂಪಗಳು, ಕೇಳಿದ ದಿವ್ಯಶಬ್ದಗಳು – ಇವೆಲ್ಲಾ ಭ್ರಮೆಯೆಂದು ನಾನು ಅಂದುಕೊಂಡೆ. ಜಗನ್ಮಾತೆಯು ನಿಜವಾಗಿಯೂ ನನ್ನನ್ನು ಮೋಸಗೊಳಿಸಿದಳೇನು? ಇದರಿಂದ ನಾನು ವಿಪರೀತ ಕಳವಳಗೊಂಡೆ. ಭಗ್ನಪ್ರೇಮದ ಭಾವನೆಯಿಂದ ಆಕೆಯ ಮುಂದೆ ಹೀಗೆ ಆಕ್ರೋಶಿಸಿದೆ: 'ತಾಯಿ, ನಾನೊಬ್ಬ ನಿರಕ್ಷರಕುಕ್ಷಿಯೆಂದೂ ಅಜ್ಞಾನಿಯೆಂದೂ ಬಗೆದು, ನೀನು ನನ್ನನ್ನು ಹೀಗೆ ಮೋಸಗೊಳಿಸುವುದೇ?' ನನ್ನ ಆ ಸಂಕಟದ ಆಕ್ರಂದನವು ನಿಲ್ಲುತ್ತಲೇ ಇಲ್ಲ. ನಾನು ಬಂಗಲೆಯಲ್ಲಿ ಕುಳಿತುಕೊಂಡು, ಅಳುತ್ತಲೇ ಇದ್ದೆ. ಇದಾಗಿ, ಯಾವಾಗಲೋ ಒಮ್ಮೆ ನೆಲದ ಮೇಲಿಂದ ಮಂಜಿನಂತೆ ಹೊಗೆ ಎದ್ದು, ನನ್ನ ಮುಂದಿನ ಜಾಗವನ್ನು ಆವರಿಸಿತು. ಆ ಹೊಗೆಯ ಮಧ್ಯದಲ್ಲಿ ಸ್ವರ್ಣವರ್ಣದ ಸುಂದರ ಮುಖವೊಂದು ಕಾಣಿಸಿಕೊಂಡಿತು. ಅದರ ಗಡ್ಡ ಎದೆಯ ತನಕ ಹಬ್ಬಿತ್ತು. ಆ ದಿವ್ಯಪುರುಷನು ನನ್ನೆಡೆಗೇ ದಿಟ್ಟಿಸುತ್ತ, ಗಂಭೀರವಾದ ಧ್ವನಿಯಲ್ಲಿ 'ಮಗು, ಭಾವಮುಖದಲ್ಲಿರು' ಎಂದು ನುಡಿದನು. ಈ ಮಾತನ್ನು ಅವನು ಮೂರು ಬಾರಿ ಉಚ್ಚರಿಸಿದನು. ಅನಂತರ ಆ ಮಂಜಿನಂತಹ ಹೊಗೆಯಲ್ಲಿ ಕಣ್ಮರೆಯಾದನು. ಹಾಗೆಯೇ ಹೊಗೆಯೂ ಶೂನ್ಯದಲ್ಲಿ ಲೀನವಾಯಿತು. ಅದಾದನಂತರವಷ್ಟೇ ನಾನು ಮನಶ್ಶಾಂತಿಯನ್ನು ಮತ್ತೆ ಪಡೆದುಕೊಂಡೆನು." ನವೆಂಬರ್ ೨೦೦೯ರಲ್ಲಿ ಈ ಕೊಠಡಿಯಲ್ಲಿ ಶ್ರೀರಾಮಕೃಷ್ಣರ ಅಮೃತಶಿಲೆಯ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಅಂದಿನಿಂದ ಇದನ್ನು ಯಾತ್ರಾರ್ಥಿಗಳಿಗಾಗಿ ತೆರೆದಿಡಲಾಗಿದೆ.

### ನಹಬತ್

ನಹಬತ್ ಎಂದರೆ 'ಸಂಗೀತ ಗೋಪುರ'. ದೇವಸ್ಥಾನದಲ್ಲಿ ವಿವಿಧ ಸಮಯಗಳಲ್ಲಿ ನಡೆಯುವ ಪೂಜೆಗಳಿಗೆ ಅಂದರೆ, ಸೂರ್ಯೋದಯ, ಮಧ್ಯಾಹ್ನ, ಸೂರ್ಯಾಸ್ತ – ಇವುಗಳಿಗೆ ಅನುಗುಣವಾಗಿ ಇಲ್ಲಿಂದ ಸಂಗೀತ ಮೂಡಿಬರುತ್ತಿತ್ತು. ದೇವಸ್ಥಾನ ಸಮುಚ್ಚಯದ ವಾಯವ್ಯ ಮತ್ತು ನೈಋತ್ಯ – ಈ ಎರಡು ದಿಕ್ಕುಗಳಲ್ಲಿ ಎರಡು ನಹಬತ್‌ಗಳಿದ್ದವು. ಆದರೆ ನಾವೀಗ ಗಮನ ಹರಿಸುವುದು ವಾಯುವ್ಯ ದಿಕ್ಕಿನಲ್ಲಿರುವ ನಹಬತ್ ಕಡೆಗೆ. ಅದು ರಾಣಿ ರಾಸಮಣಿಯ ಸ್ಮಾರಕದ ಉತ್ತರ ದಿಕ್ಕಿನಲ್ಲಿದೆ.

ಈ ನಹಬತ್, ವಿಶ್ವದ ಒಂದು ಅದ್ಭುತವೆಂದೇ ಹೇಳಬಹುದೇನೋ! ನೆಲ ಅಂತಸ್ತಿನಲ್ಲಿರುವ ಇದರ ಅತಿ ಪುಟ್ಟ ಗೂಡಿನಲ್ಲಿ ಯಾರಾದರೂ ವಾಸ ಮಾಡಿರಬಹುದೆನ್ನುವುದೇ ನಮ್ಮಲ್ಲಿ ಆಶ್ಚರ್ಯ ಮತ್ತು ಪ್ರಶಂಸೆಯ ಭಾವನೆಗಳನ್ನು